# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 517 |
| ಸದಸ್ಯರ ಹೆಸರು | ಶ್ರೀ. ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 08/12/2023 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಳ್ಳಾರಿ ಜಿಲ್ಲೆಯಲ್ಲಿ ಕೃಷಿ ಇಲಾಖೆಗೆ ಒಳಪಡುವ, ಕೃಷಿ ಇಲಾಖೆಯ ಅಧೀನದಲ್ಲಿರುವ ಭೂಮಿ/ಕಟ್ಟಡಗಳ ಸಂಖ್ಯೆ ಎಷ್ಟು; ಅವುಗಳು ಎಲ್ಲಿವೆ; (ಅವುಗಳ ಹೆಸರು, ಊರು, ವಿಸ್ತೀರ್ಣದೊಂದಿಗೆ ಸಂಪೂರ್ಣ ವಿವರ ನೀಡುವುದು) | ಬಳ್ಳಾರಿ ಜಿಲ್ಲೆಯಲ್ಲಿ ಕೃಷಿ ಇಲಾಖೆಗೆ ಒಳಪಡುವ, ಕೃಷಿ ಇಲಾಖೆಯ ಅಧೀನದಲ್ಲಿರುವ ಭೂಮಿ/ಕಟ್ಟಡಗಳ ಸಂಖ್ಯೆ:17. ಅವುಗಳ ಹೆಸರು, ಊರು, ವಿಸ್ತೀರ್ಣದೊಂದಿಗೆ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಆ) | ಬಳ್ಳಾರಿ ನಗರದ ಗುಡ್ಡದ (ಕೋಟೆ ಪ್ರದೇಶ) ಸಮೀಪದಲ್ಲಿ ಕೃಷಿ ಇಲಾಖೆಗೆ ಸೇರಿರುವ ಯಾವುದಾದರೂ ಕಟ್ಟಡವಿದೆಯೇ; ಹಾಗಿದ್ದಲ್ಲಿ, ಈ ಕಟ್ಟಡವನ್ನು ಯಾವಾಗ ಮತ್ತು ಯಾವ ಉದ್ದೇಶಕ್ಕಾಗಿ ಕಟ್ಟಲಾಗಿದೆ; ಈಗ ಕಟ್ಟಡವನ್ನು ಖಾಲಿ ಬಿಟ್ಟಿರಲು ಕಾರಣಗಳೇನು; (ಮಾಹಿತಿ ನೀಡುವುದು) | ಹೌದು.<br>2012 ರವರೆಗೆ ಈ ಕಟ್ಟಡ ಹಾಗೂ ಭೂಮಿಯು ಕರ್ನಾಟಕ ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಲಿಮಿಟೆಡ್ ಇವರ ಹೆಸರಿನಲ್ಲಿದ್ದು ಈ ಸಂಸ್ಥೆಯು ಸಾರ್ವಜನಿಕ ಉದ್ದಿಮೆಗಳ ಇಲಾಖೆಯಾಗಿದ್ದು, ರೈತರಿಗೆ ರಿಯಾಯಿತಿ ದರದಲ್ಲಿ ಕೃಷಿ ಪರಿಕರ, ಕೃಷಿ ಉಪರಣಗಳು ಹಾಗೂ ಕೃಷಿ ಯಂತ್ರೋಪಕರಣಗಳನ್ನು ವಿತರಿಸಲು ಈ ಸಂಸ್ಥೆಯು ಕಾರ್ಯನಿರ್ವಹಿಸುತ್ತಿತ್ತು.<br>1985-86 ಮತ್ತು 1986-87 ಎರಡು ವರ್ಷಗಳಲ್ಲಿ ಕನಿಷ್ಟ ಲಾಭ ತೋರಿಸಿರುವುದನ್ನು ಹೊರತುಪಡಿಸಿದರೆ, ಬಾಕಿ ಉಳಿದ ಎಲ್ಲಾ ವರ್ಷಗಳಲ್ಲಿಯೂ ನಷ್ಟವನ್ನೇ ಅನುಭವಿಸುತ್ತಾ ಬಂದಿರುವುದರಿಂದ ಹಾಗೂ ಕೆ.ಎ.ಐ.ಸಿ.ಯ ವೆಚ್ಚಗಳು ಆದಾಯಕ್ಕಿಂತ ಜಾಸ್ತಿಯಾಗಿರುವುದರಿಂದಲೂ ಹಾಗೂ ಇನ್ನಿತರೆ ಕಾರಣಗಳಿಂದ ಕರ್ನಾಟಕ ಕೃಷಿ ಕೈಗಾರಿಕೆ ನಿಗಮವನ್ನು ಕಾನೂನಿನ ಪ್ರಕ್ರಿಯೆಗಳಿಗನುಸಾರ ಮುಚ್ಚಲು ಸರ್ಕಾರದ ಆದೇಶ ಸಂಖ್ಯೆ:DDPER 55 ARU 2003 ದಿನಾಂಕ:03.09.2003 ರ ಆದೇಶದಲ್ಲಿ ಪರವಾನಿಗೆ ನೀಡಿ ಈ ಪ್ರಕಾರ ಕೆ.ಎ.ಐ.ಸಿ. ಸಂಸ್ಥೆಗೆ ಸೇರಿದ ಆಸ್ತಿ/ಸ್ಥಿರಾಸ್ತಿಗಳನ್ನು ಸರ್ಕಾರದ ಆದೇಶ ಸಂಖ್ಯೆ: ಕೃಇ/162/ಕೃಇಕ/2011, ದಿನಾಂಕ:31.08.2012 ರ ಪ್ರಕಾರ ಸ್ಥಿರಾಸ್ತಿಗಳನ್ನು ಕೃಷಿ ಇಲಾಖೆಯ ಚಟುವಟಿಕೆಗಳಿಗೆ ಮಾತ್ರ ಉಪಯೋಗಿಸತಕ್ಕದ್ದು ಹಾಗೂ ಬೇರೆಯವರಿಗೆ ಬಾಡಿಗೆ/ ಲೀಸ್ ಆಧಾರದ ಮೇಲೆ ನೀಡತಕ್ಕದ್ದಲ್ಲ ಎಂಬ ಷರತ್ತಿಗೊಳಪಟ್ಟು ಕೃಷಿ ಇಲಾಖೆಗೆ ಹಸ್ತಾಂತರಿಸಿಕೊಳ್ಳಲಾಗಿದೆ. |

| | | |
|---|---|---|
| ಇ) | ಹಾಳು ಬಿದ್ದಿರುವ ಕೋಟ್ಯಾಂತರ ರೂಪಾಯಿ ಮೌಲ್ಯದ ಕಟ್ಟಡವನ್ನು ಸರ್ಕಾರಿ ಕಛೇರಿಗಳಿಗಾಗಿ ಬಳಕೆ ಮಾಡಿಕೊಳ್ಳಲು ಸಾಧ್ಯವಿಲ್ಲವೇ; ಈ ಕಟ್ಟಡ ಅಥವಾ ಸ್ಥಳವನ್ನು ಸದ್ಬಳಕೆ ಮಾಡಿಕೊಳ್ಳಲು ಜಿಲ್ಲಾಡಳಿತ ಹಾಗೂ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಸರ್ಕಾರದ ಆದೇಶ ಸಂಖ್ಯೆ:ಕೃಇ/162/ಕೃಇಕ/2011, ದಿನಾಂಕ:31.08.2012ರ ಪ್ರಕಾರ ಸ್ಥಿರಾಸ್ತಿಗಳನ್ನು ಕೃಷಿ ಇಲಾಖೆಯ ಚಟುವಟಿಕೆಗಳಿಗೆ ಮಾತ್ರ ಉಪಯೋಗಿಸತಕ್ಕದ್ದು ಹಾಗೂ ಬೇರೆಯವರಿಗೆ ಬಾಡಿಗೆ/ಲೀಸ್ ಆದಾರದ ಮೇಲೆ ನೀಡತಕ್ಕದ್ದಲ್ಲ ಎಂಬ ಷರತ್ತಿಗೊಳಪಟ್ಟು ಆದೇಶವಾಗಿರುವುದರಿಂದ ಕೃಷಿ ಇಲಾಖೆಯ ಚಟುವಟಿಕೆಗಳಿಗೆ ಬಳಕೆ ಮಾಡಲಾಗುವುದು. |

**ಸಂಖ್ಯೆ: AGRI/238/ACT/2023**

**(ಎನ್. ಚಲುವರಾಯಸ್ವಾಮಿ)**
**ಕೃಷಿ ಸಚಿವರು**

## ಅನುಬಂಧ- LCQ-517
## ಬಳ್ಳಾರಿ ಜಿಲ್ಲೆಯಲ್ಲಿರುವ ಕೃಷಿ ಇಲಾಖೆಯ ಭೂಮಿ/ಕಟ್ಟಡಗಳ ವಿಸ್ತೀರ್ಣದ ಮಾಹಿತಿ

| ಕ್ರ. ಸಂ. | ಭೂಮಿ/ಕಟ್ಟಡಗಳ ಹೆಸರು | ಭೂಮಿ/ ಕಟ್ಟಡವಿರುವ ಸ್ಥಳ | ವಿಸ್ತೀರ್ಣ |
|---|---|---|---|
| 1 | ಜಂಟಿ ಕೃಷಿ ನಿರ್ದೇಶಕರ ಕಛೇರಿ, ಬಳ್ಳಾರಿ | ಬಳ್ಳಾರಿ | 100 x 80 ಅಡಿ |
| 2 | ಉಪ ಕೃಷಿ ನಿರ್ದೇಶಕರು-1 ಕಛೇರಿ, ಬಳ್ಳಾರಿ | ಬಳ್ಳಾರಿ | 70 x 70 ಅಡಿ |
| 3 | ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಬಳ್ಳಾರಿ | ಬಳ್ಳಾರಿ | 120 x 60 ಅಡಿ |
| 4 | ರೈತ ಸಂಪರ್ಕ ಕೇಂದ್ರ ಬಳ್ಳಾರಿ | ಬಳ್ಳಾರಿ | 20 x 40 ಅಡಿ |
| 5 | ರೈತ ಸಂಪರ್ಕ ಕೇಂದ್ರ ರೂಪನಗುಡಿ | ರೂಪನಗುಡಿ | 36 x 40 ಅಡಿ |
| 6 | ರೈತ ಸಂಪರ್ಕ ಕೇಂದ್ರ ಮೋಕ | ಮೋಕ | 28 x 60 ಅಡಿ |
| 7 | ರೈತ ಸಂಪರ್ಕ ಕೇಂದ್ರ ಕುರುಗೋಡು | ಕುರುಗೋಡು | 50 x 60 ಅಡಿ |
| 8 | ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಸಿರುಗುಪ್ಪ | ಸಿರುಗುಪ್ಪ | 100 x 80 ಅಡಿ |
| 9 | ರೈತ ಸಂಪರ್ಕ ಕೇಂದ್ರ ಸಿರುಗುಪ್ಪ | ಸಿರುಗುಪ್ಪ | 80 x 30 ಅಡಿ |
| 10 | ರೈತ ಸಂಪರ್ಕ ಕೇಂದ್ರ ಕಂಪ್ಲಿ | ಕಂಪ್ಲಿ | 80 x 30 ಅಡಿ |
| 11 | ರೈತ ಸಂಪರ್ಕ ಕೇಂದ್ರ ಕರೂರು | ಕರೂರು | 80 x 30 ಅಡಿ |
| 12 | ರೈತ ಸಂಪರ್ಕ ಕೇಂದ್ರ ಹಚ್ಚೊಳ್ಳಿ | ಹಚ್ಚೊಳ್ಳಿ | 100 x 40 ಅಡಿ |
| 13 | ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಸಂಡೂರು | ಸಂಡೂರು | 425 Sq. Mtrs. |
| 14 | ರೈತ ಸಂಪರ್ಕ ಕೇಂದ್ರ ಸಂಡೂರು | ಸಂಡೂರು | 280.65 Sq. Mtrs. |
| 15 | ರೈತ ಸಂಪರ್ಕ ಕೇಂದ್ರ ಚೋರನೂರು | ಚೋರನೂರು | 900 Sq. Mtrs. |
| 16 | ಮಣ್ಣು ಆರೋಗ್ಯ ಕೇಂದ್ರ ಬಳ್ಳಾರಿ | ಬಳ್ಳಾರಿ | 100 x 80 ಅಡಿ |
| 17 | ಸಹಾಯಕ ಕೃಷಿ ನಿರ್ದೇಶಕರು ಕಚೇರಿ, ಜಿಲ್ಲಾ ಕೃಷಿ ತರಬೇತಿ ಕೇಂದ್ರ ಹಾಗೂ ವಸತಿ ಗೃಹ | ಕಂಪ್ಲಿ | 10 ಹೆಕ್ಟೇರ್ |